# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನಸಭೆ
## ಎಂಟನೇ ಅಧಿವೇಶನ
## (ಮುಂದುವರೆದ ಉಪವೇಶನಗಳು)

# ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2015
## (2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 42)

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು (2003ರ ಕರ್ನಾಟಕ ಅಧಿನಿಯಮ 45) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ" ಎಂಬ ಪದಗಳಿಗೆ ಮೊದಲು "ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ, "ಒಂದು ನೂರು ಕೋಟಿ ರೂಪಾಯಿಗಳು" ಎಂಬ ಪದಗಳಿಗೆ "ಐದು ನೂರು ಕೋಟಿ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 6ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, "'ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ' " ಎಂಬ ಪದಗಳಿಗೆ ಮೊದಲು "ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ, "ಒಂದು ನೂರು ಕೋಟಿ ರೂಪಾಯಿಗಳಿಗಿಂತ" ಎಂಬ ಪದಗಳಿಗೆ "ಐದು ನೂರು ಕೋಟಿ ರೂಪಾಯಿಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಐದು ನೂರು ಕೋಟಿ ರೂಪಾಯಿಗಳವರೆಗಿನ ಕೈಗಾರಿಕೆ ಮತ್ತು ಇತರ ಪ್ರಾಜೆಕ್ಟ್‌ಗಳಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಗೆ ಮತ್ತು ಐದು ನೂರು ಕೋಟಿ ರೂಪಾಯಿಗಳನ್ನು ಮೀರಿದ ಕೈಗಾರಿಕೆ ಮತ್ತು ಇತರ ಪ್ರಾಜೆಕ್ಟ್‌ಗಳಿಗೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ ಅಧಿಕಾರವನ್ನು ನೀಡುವುದಕ್ಕಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು (2003ರ ಕರ್ನಾಟಕ ಅಧಿನಿಯಮ 45) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್.ವಿ. ದೇಶಪಾಂಡೆ**
ಬೃಹತ್ ಮತ್ತು ಮಧ್ಯಮ ಕೈಗಾರಿಕಾ
ಹಾಗೂ ಪ್ರವಾಸೋದ್ಯಮ ಸಚಿವರು

**ಎಸ್. ವೈ. ಕುಳಗೇರಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

# ಅನುಬಂಧ

## ಕರ್ನಾಟಕ ಕೈಗಾರಿಕೆಗಳ ( ಸೌಲಭ್ಯ ) ಅಧಿನಿಯಮ, 2002ರ (2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 45) ಉದ್ಧೃತ ಭಾಗ

XXX XXXX XXX

**3. ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ:-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತ ಅಂಥ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಹಂತ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು.

(2) ಸಮಿತಿಯು, ಪ್ರತಿಯೊಂದು ಪ್ರಕರಣದಲ್ಲಿ ಒಂದು ನೂರು ಕೋಟಿ ರೂಪಾಯಿಗಳು ಮತ್ತು ಅದಕ್ಕೂ ಹೆಚ್ಚಿನ ಹೂಡಿಕೆಯೊಡನೆ ರಾಜ್ಯದಲ್ಲಿ ಸ್ಥಾಪಿಸಲಾಗುವ ಯಾವುದೇ ಕೈಗಾರಿಕೆ ಅಥವಾ ಇತರ ಯೋಜನೆಗಳಿಗೆ ಸಂಬಂಧಪಡುವ ಯಾವೊಬ್ಬ ಉದ್ಯಮ ದಾರನಿಂದ ಸ್ವೀಕರಿಸಿದ ಪ್ರಸ್ತಾವಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

XXX XXXX XXX

**6. ರಾಜ್ಯಮಟ್ಟದ ಏಕಗವಾಕ್ಷಿ-ಒಪ್ಪಿಗೆ ನೀಡಿಕೆ ಸಮಿತಿ:-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಸದಸ್ಯರುಗಳನ್ನು ಒಳಗೊಂಡ 'ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ' ಎಂದು ಕರೆಯಲಾಗುವ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು.

(2) ರಾಜ್ಯ ಮಟ್ಟದ ಏಕಗವಾಕ್ಷಿ - ಒಪ್ಪಿಗೆ ನೀಡಿಕೆ ಸಮಿತಿಯು, ಹದಿನೈದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮತ್ತು ಒಂದು ನೂರು ಕೋಟಿ ರೂಪಾಯಿಗಳಿಗಿಂತ ಕಡಿಮೆ ಹೂಡಿಕೆಯೊಡನೆ, ರಾಜ್ಯದಲ್ಲಿ ಸ್ಥಾಪಿಸಲಾಗುವ ಕೈಗಾರಿಕೆ ಮತ್ತು ಇತರ ಯೋಜನೆಗಳಿಗೆ ಸಂಬಂಧಪಡುವ, ಉದ್ಯಮದಾರರಿಂದ ಸ್ವೀಕರಿಸಲಾದ ಪ್ರಸ್ತಾವವನ್ನು ಪರೀಕ್ಷಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

XXX XXXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ 669, 1000-ಪ್ರತಿಗಳು 25ನೇ ನವೆಂಬರ್, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**EIGHTH SESSION**

**(ADJOURNED MEETINGS)**

# THE KARNATAKA INDUSTRIES (FACILITATION) (AMENDMENT) BILL, 2015

**(L.A. Bill No. 42 of 2015)**

A Bill further to amend the Karnataka Industries (facilitation) Act, 2002.

Whereas it is expedient to amend the Karnataka Industries (facilitation) Act, 2002 (Karnataka Act 45 of 2003) for the purposes hereinafter appearing;

Be it enacted by the Karnataka State Legislature in the Sixty-sixth year of the Republic of India, as follows:-

**1. Short title and commencement.**- (1) This Act may be called the Karnataka Industries (Facilitation) (Amendment) Act, 2015.

(2) It shall come into force at once.

**2. Amendment of section 3.**- In the Karnataka Industries (Facilitation) Act, 2002 (Karnataka Act 45 of 2003) (hereinafter referred to as the principal Act,) in section 3,-

(i) in sub-section (1), after the words "State High Level Clearance Committee" the words "under the chairmanship of the Chief Minister" shall be inserted; and

(ii) in sub-section (2), for the words "one hundred crores" the words "five hundred crores" shall be substituted.

**3. Amendment of section 6.**- In section 6 of the principal Act ,-

(i) in sub-section (1), after the words "State Level Single Window Clearance Committee" the words "under the chairmanship of the Minister incharge of major and medium industries" shall be inserted; and

(ii) in sub-section (2), for the words "one hundred crores" the words "five hundred crores" shall be substituted.

## STATEMENT OF OBJECTS AND REASONS

It is considered necessary to amend the Karnataka Industries (facilitation) Act, 2002 (Karnataka Act 45 of 2003) to empower State Level Single Window Clearance Committee to consider industrial and other projects up to Rupees Five Hundred Crores under the chairmanship of the Minister in charge of major and medium industries and State High Level Clearance Committee to consider industrial and other projects of more than Rupees Five Hundred Crores under the chairmanship of the Chief Minister.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**R.V.DESHAPANDE**
Minister for Major & Medium
Industries and Tourism

**S.Y. KULAGERI**
Secretary (I/C)
Karnataka Legislative Assembly

## ANNEXURE

## THE KARNATAKA INDUSTRIES (FACILITATION) ACT, 2002 (KARNATAKA ACT NO. 45 OF 2003)

**XX XX XX**

**3. State High Level Clearance Committee.-** (1) The State Government may by notification constitute a single point clearance committee called on State High Level Clearance Committee consisting of such members as may be specified therein

(2) The Committee shall examine and consider the proposals received from any entrepreneur relating to any industrial and other projects to be set up in the State, with an investment of rupees one hundred crores and above in each case.

**XX XX XX**

**6. State Level Single Window Clearance Committee.-** (1) The State Government may by notification constitute a single window clearance committee for the State called as the 'State Level Single Window Clearance Committee' consisting of such members as may be specified therein.

(2) The State Level Single Window Clearance Committee shall examine and consider proposal received from the entrepreneurs relating to industrial and other projects to be set up in the State with an investment of more than fifteen crores rupees and less than rupees one hundred crores each.

**XX XX XX**

Government Press, Vikasa Soudha, Bengaluru, P7, W.D. , Copies 1000, 18th, 2015